(ರೂ. ಕೋಟಿಗಳಲ್ಲಿ)

೧)	೧೯೯೨-೯೩ನೇ ಸಾಲಿಗೆ ರಾಜ್ಯ 'ಪ್ರಕೃತಿ ವಿಕೋಪ ಪರಿಹಾರ ನಿಧಿ'ಗೆ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿದ ವಂತಿಗೆ	೨೦.೨೫
೨)	೧೯೯೩-೯೪ ನೇ ಸಾಲಿನ ೧ ಮತ್ತು ೨ನೇ ಕಂತನ್ನು ಮುಂಗಡವಾಗಿ ' ಪ್ರಕೃತಿ ವಿಕೋಪ ಪರಿಹಾರ ನಿಧಿ'ಗೆ ಬಿಡುಗಡೆ ಮಾಡಿರುವ ವಂತಿಗೆ	೧೦.೧೨
	ಒಟ್ಟು:	೩೦.೩೭

ವಿಷಯ:- ತೋಟಗಾರಿಕಾ ಉತ್ಪಾದನೆ. ಬೆಳೆಗಾರರ ಸಹಕಾರ ಸಂಘದ ಸಿಬ್ಬಂದಿಯ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೧೯:- (೬೩೬ಎ)
ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ)
ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೋಟಗಾರಿಕಾ ಉತ್ಪಾದನೆಗಳ ಬೆಳೆಗಾರರ ಸಹಕಾರ ಸಂಘದಲ್ಲಿ ಕೆಲಸ ಮಾಡುತ್ತಿರುವವರ ಸಂಖ್ಯೆ ಎಷ್ಟು ಹಾಗೂ ಅದರಲ್ಲಿ ಎಸ್.ಸಿ:ಎಸ್.ಟಿ.ಮತ್ತು ಹಿಂದುಳಿದವರು ಎಷ್ಟು ಜನರಿದ್ದಾರೆ.

ಶ್ರೀ ಎ.ಕೃಷ್ಣಪ್ಪ.
(ತೋಟಗಾರಿಕಾ ಸಚಿವರು)

ತೋಟಗಾರಿಕಾ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘದಲ್ಲಿ ದಿನಾಂಕ ೩೧.೧೨.೯೩ ರಲ್ಲಿದ್ದಂತೆ ೬೨೬ ನೌಕರರಿದ್ದು ಅವರಲ್ಲಿ ೩೦ ಜನ ಎಸ್.ಸಿ. ೫೧ ಜನ ಎಸ್.ಟಿ. ಹಾಗೂ ೪೯೧ ಜನ ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದಾರೆ.

ವಿಷಯ:- ಲಖಮಾಪುರದ ಕುಡಿಯವ ನೀರಿನ ಬಾವಿಯ ದುರಸ್ಥಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೧೦:- (೫೫೨)
ಶ್ರೀ ಹೆಚ್.ಎಂ.ರೇವಣ್ಣ (ಮಾಗಡಿ)
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೯೨ನೇ ಇಸವಿಯ ಅಕ್ಟೋಬರ್ ಹಾಗೂ ನವೆಂಬರ್ ಮಾಹೆಗಳಲ್ಲಿ ಆಗಿರುವ ಬಾರಿ ಮಳೆಯಿಂದಾಗಿ ಬಿಜಾಪುರ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಲಖಮಾಪುರ ಗ್ರಾಮದಲ್ಲಿರುವ ಕುಡಿಯವ ನೀರಿನ ಬಾವಿಯು ಬಿದ್ದು ಮುಚ್ಚು ಹೋಗಿರುವುದರಿಂದಾಗಿ ಆ ಗ್ರಾಮದ ಜನತೆಯು ಕುಡಿಯುವ ನೀರಿಗಾಗಿ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಸದರಿ ಗ್ರಾಮದ ಜನತೆಯು ಕುಡಿಯುವ ನೀರಿನ ತೊಂದರೆ ನಿವಾರಿಸಲು ಸದರಿ ಬಿದ್ದು ಮುಚ್ಚಿ ಹೋಗಿರುವ ಬಾವಿಯನ್ನು ತುರ್ತಾಗಿ ದುರಸ್ತಿಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಇ) ಹಾಗಿದ್ದಲ್ಲಿ ದುರಸ್ತಿಗೊಳಿಸಲು ಬೇಕಾಗುವ ಕಾಲಾವಧಿ ಎಷ್ಟು?

ಶ್ರೀ ಎಂ. ವೈ. ಘೋರ್ಪಡೆ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಹೌದು

ಹೌದು

ಸುಮಾರು ಒಂದು ತಿಂಗಳ ಕಾಲಾವಧಿ ಬೇಕಾಗುವುದು.

ವಿಷಯ:- ರಾಜ್ಯದ ಜಮೀನುಗಳ ಸರ್ವೆ

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ ೧೧೧:- (೬೨೮)

ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ)

ಮಾನ್ಯ ಕಂದಾಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಎಲ್ಲಾ ಭೂಪ್ರದೇಶಗಳನ್ನು ಯಾವಾಗ ಸರ್ವೆ ಮಾಡಲಾಗಿತ್ತು, ಹಾಗೂ ಯಾರಿಂದ ಮಾಡಿಸಲ್ಪಟ್ಟಿತ್ತು.

ಆ) ಈ ಸರ್ವೆಯಾದ ನಂತರ ಯಾವಾಗ ಮರು ಸರ್ವೆ ಮಾಡಬೇಕಾಗಿತ್ತು, ಹಾಗೂ ಇದುವರೆಗೂ ಈ ಕಾರ್ಯವನ್ನು ಮಾಡದಿರುವುದಕ್ಕೆ ಕಾರಣಗಳೇನು.

ಇ) ಸರ್ವೆ ಕಾರ್ಯವನ್ನು ಇದುವರೆಗೂ ಕೈಗೊಳ್ಳದೆ ಇರುವುದರಿಂದ ರಾಜ್ಯದ ರೈತರಿಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಈ) ಇದರಿಂದಾಗಿ ಭೂದಾಖಲಾತಿಗಳು ನಶಿಸಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಉ) ಈ ದಿಸೆಯಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಊ) ಈ ಭೂ ಸರ್ವೆ ಕಾರ್ಯವನ್ನು ಯಾವಾಗ ಕೈಗೊಳ್ಳಲಾಗವುದು?

ಶ್ರೀ ಎಂ.ರಾಜಶೇಖರ ಮೂರ್ತಿ
(ಕಂದಾಯ ಸಚಿವರು.)

ರಾಜ್ಯದಲ್ಲಿನ ಎಲ್ಲಾ ಭೂಪ್ರದೇಶಗಳನ್ನು ಆಯಾ ರಾಜ್ಯದ ಎದುರಿಗೆ ನಮೂದಿಸಿರುವ ಇಸವಿಯಲ್ಲಿ ಈ ಕೆಳಕಂಡಂತೆ ಮಾಡಿರುತ್ತೆ:

ಪ್ರದೇಶ	ಇಂದ	ವರೆಗೆ
೧. ಹಳೇ ಮೈಸೂರು ಪ್ರದೇಶ	೧೮೬೩	೧೮೯೦
೨. ಬಾಂಬೆ ಪ್ರದೇಶ	೧೮೪೦	೧೮೬೩
೩. ಮದರಾಸು ಪ್ರದೇಶ	೧೮೯೩	೧೯೦೪
೪. ಹೈದರಾಬಾದ್ ಪ್ರದೇಶ	೧೮೭೫	೧೮೮೮
೫. ಕೂರ್ಗ್ ಪ್ರದೇಶ	೧೮೦೬	೧೮೧೬

ಈ ಸರ್ವೆಯನ್ನು ಸರ್ಕಾರದ ಆದೇಶದ ಮೇರೆಗೆ ಆಯಾ ರಾಜ್ಯದ ಸರ್ವೆ ಸೆಟಲ್‌ಮೆಂಟ್ ಮತ್ತು ಭೂದಾಖಲೆಗಳ ಇಲಾಖೆಯ ನಿರ್ದೇಶಕರು ಮಾಡಿಸಿರುತ್ತಾರೆ.ಸರ್ವೆ ನಿಬಂಧನೆ ಪ್ರಕಾರ, ಈ ಸರ್ವೆ ಆದ ನಂತರ ೩೦ ವರ್ಷಕ್ಕೆ ಮತ್ತೇ ಸರ್ವೆ ಮಾಡಬೇಕಾಗಿತ್ತು. ಆರ್ಥಿಕ ಮತ್ತು ಸಿಬ್ಬಂದಿ ಕೊರತೆ ಇರುವುದರಿಂದ, ಇದು ವರೆವಿಗೂ ಮಾಡಿರುವುದಿಲ್ಲ.

ಹೌದು.

ಹೌದು.